**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 37/2021**

**ಚಾ.ಸಾ. :-1**
**ಪ್ರಾ.ಸಾ. :-1**

| | |
|---|---|
| ಹೆಸರು | : ನವೀನ್ ಕುಮಾರ್ |
| ತಂದೆಯ ಹೆಸರು | : ಚಿಕ್ಕಪಿಡ್ಡೆ |
| ವಯಸ್ಸು | : 40 ವರ್ಷ |
| ಉದ್ಯೋಗ | : ವಾಟರ್ ಮ್ಯಾನ್ |
| ವಾಸಸ್ಥಳ | : ಮಿಣಚಿಬೋರನಕೊಪ್ಪಲು ಗ್ರಾಮ |

---

**ಪ್ರಮಾಣೀಕರಿಸಲಾದ ದಿನಾಂಕಃ- 01.12.2025**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ಕರಿಘಟ್ಟಯ್ಯ ನನ್ನ ಸಂಬಂಧಿಕರು. ಚಾ.ಸಾ-2 ರಿಂದ 5 ರವರು ನಮ್ಮ ಊರಿನವರು. ದಿನಾಂಕಃ 11.10.2020 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಾನು ಮತ್ತು ಮೃತ ಕರಿಘಟ್ಟಯ್ಯರವರು ಟೀ ಕುಡಿಯುವ ಸಲುವಾಗಿ ಕಿರಂಗೂರು ಸರ್ಕಲಿನ ಬೇಕರಿಯೊಂದಕ್ಕೆ ಹೋಗಿದ್ದೆವು. ಕರಿಘಟ್ಟಯ್ಯರವರು ಟೀ ಕುಡಿದು ನಡೆದುಕೊಂಡು ಹೋಗುತ್ತಿದ್ದಾಗ ಶ್ರೀರಂಗಪಟ್ಟಣದ ಕಡೆಯಿಂದ ಬಂದಂತಹ ದ್ವಿಚಕ್ರ ವಾಹನ ವೇಗವಾಗಿ ಬಂದು ಕರಿಘಟ್ಟಯ್ಯರವರಿಗೆ ಡಿಕ್ಕಿಪಡಿಸಿರುತ್ತದೆ. ನಾವು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಹೆಚ್ಚಿ ನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ, ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ.

ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯ ಸಹಿ ಇರುವ ಇನ್ನೊಂದು ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗ ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು.

ಗಾಯಾಳು 2-3 ದಿನಗಳ ನಂತರ ಮೃತಪಟ್ಟಿರುತ್ತಾರೆ. ಆ ಬಗ್ಗೆ ಪೊಲೀಸರಿಗೆ ಮುಂದುವರೆದ ದೂರು ನೀಡಿರುತ್ತೇನೆ. ಮುಂದುವರೆದ ದೂರನ್ನು ಈಗ ನಿಪಿ-3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರ್ತಿಸಲಾಯಿತು.

ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುತ್ತದೆ.

**ನ್ಯಾಯಾಲಯದ ಸಮಯ ಮುಗಿದಿರುವ ಕಾರಣ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**